## 1. ಅಣಬೆ ಉಪ್ಪಿನಕಾಯಿ

**ಪದಾರ್ಥಗಳು**

| | |
|---|---|
| ಅಣಬೆ(ತಾಜಾ) | : 1 ಕಿ.ಗ್ರಾಂ. |
| ಅಡುಗೆ ಎಣ್ಣೆ | : 100 ಗ್ರಾಂ. |
| ಉಪ್ಪು | : 30 ಗ್ರಾಂ. |
| ಕೆಂಪು ಮೆಣಸಿನ ಕಾಯಿ ಪುಡಿ | : 25 ಗ್ರಾಂ. |
| ಸಾಸಿವೆ | : 3 ಗ್ರಾಂ. |
| ಮೆಂಥೆ | : 1.6 ಗ್ರಾಂ. |
| ಜೀರಿಗೆ | : 1.5 ಗ್ರಾಂ. |
| ಲವಂಗ | : 3 ಗ್ರಾಂ. |
| ದಾಲ್ಚಿನ್ನಿ ಅಥವಾ ಚಕ್ಕೆ | : 2 ಗ್ರಾಂ. |
| ಕರಿ ಮೆಣಸು | : 6 ಗ್ರಾಂ. |
| ಗ್ಲೇಸಿಯಲ್ ಅಸಿಟಿಕ್ ಆಮ್ಲ | : 20 ಮಿ.ಲೀ. |
| ಇಂಗು | : ಒಂದು ಚಿಟಿಕೆ |

**ತಯಾರಿಸುವ ವಿಧಾನ**

- ನೀರಿನಿಂದ ಅಣಬೆಯನ್ನು ಚೆನ್ನಾಗಿ ತೊಳೆದುಕೊಳ್ಳಬೇಕು.
- ಅಣಬೆಯನ್ನು 1 ಇಂಚು ಉದ್ದದ ತುಂಡುಗಳಾಗಿ ಕಾಂಡ ಸಹಿತ ಕತ್ತರಿಸಬೇಕು.
- ಅಣಬೆಯನ್ನು ಒಂದು ನಿಮಿಷ ಹುರಿಯಬೇಕು.
- ಹುರಿಯುವಾಗ ಉಪ್ಪಿನ ಅರ್ಧ ಭಾಗವನ್ನು ಹಾಕಬೇಕು.
- ಪಾತ್ರೆಯನ್ನು ಒಲೆಯಿಂದ ಇಳಿಸಿ ಅದಕ್ಕೆ ಉಳಿದ ಉಪ್ಪು ಮತ್ತು ಗ್ಲೇಸಿಯರ್ ಅಸಿಟಿಕ್ ಆಮ್ಲವನ್ನು ಹಾಕಿ ಒಂದು ಕಡೆ ಇಡಬೇಕು.
- ಒಲೆಯ ಮೇಲೆ ಪಾತ್ರೆಯಿಟ್ಟು ಎಣ್ಣೆ ಬಿಸಿ ಮಾಡಿಕೊಂಡು ಅದಕ್ಕೆ ಸಾಸಿವೆ, ಕೆಂಪು ಮೆಣಸಿನಕಾಯಿ ಮತ್ತು ಇಂಗನ್ನು ಹಾಕಬೇಕು.

## 2. ಅಣಬೆ ಸೂಪ್

**ಪದಾರ್ಥಗಳು**

| | |
|---|---|
| ತಾಜಾ ಅಣಬೆ ಅಥವಾ ಒಣಗಿದ ಅಣಬೆ | : 200 ಗ್ರಾಂ. |
| ತುಂಡು/ಪುಡಿ | : 20 ಗ್ರಾಂ. |
| ಹಾಲು | : 300 ಮಿ.ಲೀ. |
| ಈರುಳ್ಳಿ | : 50 ಗ್ರಾಂ. |
| ಕರಿಬೇವಿನ ಎಲೆಗಳು | : 2 |
| ಬೆಣ್ಣೆ | : 30 ಗ್ರಾಂ. |
| ಕರಿಮೆಣಸು | : 5–6 |
| ಲವಂಗ | : 4 |
| ಮೈದಾ: | 15 ಗ್ರಾಂ. |
| ತಾಜಾ ಕ್ರೀಮ್ | : 50 ಗ್ರಾಂ. |
| ಬಿಳಿ ಮೆಣಸಿನ ಪುಡಿ | : 5 ಗ್ರಾಂ. |
| ಜಾಯಿಕಾಯಿಪುಡಿ | : ಒಂದು ಚಿಟಿಕೆ |
| ಉಪ್ಪು | : ರುಚಿಗೆ ತಕ್ಕಷ್ಟು |

**ತಯಾರಿಸುವ ವಿಧಾನ**

- ತಾಜಾ ಅಣಬೆಯನ್ನು ಚೆನ್ನಾಗಿ ತೊಳೆದುಕೊಂಡು ಅದನ್ನು 4–5 ತುಂಡುಗಳಾಗಿ ಕತ್ತರಿಸಿಕೊಳ್ಳಬೇಕು ಮತ್ತು ಈರುಳ್ಳಿಯನ್ನು ಕತ್ತರಿಸಿಕೊಳ್ಳಬೇಕು.
- ಹಾಲನ್ನು ಬೇ ಎಲೆಗಳು, ಮೆಣಸು ಮತ್ತು ಲವಂಗದೊಂದಿಗೆ ಕಾಯಿಸಬೇಕು.
- ಹಾಲನ್ನು ಸೋಸಿಕೊಂಡು ಇಟ್ಟುಕೊಳ್ಳಬೇಕು.
- ಬಾಣಲೆಗೆ ಬೆಣ್ಣೆ ಹಾಕಿ ಕರಗಿಸಬೇಕು.
- ಇದಕ್ಕೆ ಕತ್ತರಿಸಿದ ಈರುಳ್ಳಿ ಮತ್ತು ಅಣಬೆಯನ್ನು ಸೇರಿಸಿ ಅಣಬೆ ಮೆತ್ತಗಾಗುವವರೆಗೂ ಬೇಯಿಸಬೇಕು.
- ನಂತರ ಇದಕ್ಕೆ ಮೈದಾ ಬೆರೆಸಿ ಮೈದಾ ಹಿಟ್ಟಿನ ವಾಸನೆ ಹೋಗುವವರೆಗೆ ಬೇಯಿಸಬೇಕು, ಮೈದಾ ಸೀದು ಹೋಗದ ಹಾಗೆ ನೋಡಿಕೊಳ್ಳಬೇಕು.
- ಹಾಲನ್ನು ನಿಧಾನವಾಗಿ ಬಾಣಲೆಗೆ ಹಾಕಿ ತಿರುಗಿಸಬೇಕು.
- ನಂತರ 5 ನಿಮಿಷ ಬೇಯಿಸಿಕೊಳ್ಳಬೇಕು.

**ತಯಾರಿಸುವ ವಿಧಾನ**

- ಆರಿಸುತ್ತಾ ನುಣ್ಣನೆ ಕೆನೆಯಾಗಿಸಬೇಕು.
- ಸೂಪ್ ಮೃದುವಾದ ರಚನೆ ಹೊಂದಿರಬೇಕು.
- ಸೂಪನ್ನು ಕುದಿಯಲು ಬಿಡಬೇಕು, ಹದವನ್ನು ನೋಡಿಕೊಂಡು ಸ್ವಲ್ಪ ಹಾಲನ್ನು ಸೇರಿಸಬಹುದು.
- ನಂತರ ಕೊನೆಯದಾಗಿ ಸ್ವಲ್ಪ ಕ್ರೀಮ್‌ಅನ್ನು ಅಲಂಕಾರಕ್ಕಾಗಿ ತೆಗೆದಿಟ್ಟು ಮಿಕ್ಕ ಕ್ರೀಮ್ ಅನ್ನು ಸೂಪಿಗೆ ಸೇರಿಸಬೇಕು. ಜೊತೆಯಲ್ಲೇ ಉಪ್ಪು, ಬಿಳಿ ಮೆಣಸಿನ ಪಲುಡಿ ಮತ್ತು ಜಾಯಿಕಾಯಿಯ ಪುಡಿ ಸೇರಿಸಬೇಕು.
- ಸೂಪನ್ನು ಬಿಸಿಯಿರುವಾಗಲೇ ಬಡಿಸಬೇಕು. ಬಡಿಸುವಾಗ ಸೂಪಿಗೆ ಕ್ರೀಮ್ ಮತ್ತು ಅಣಬೆ ತುಂಡುಗಳಿಂದ ಅಲಂಕಾರ ಮಾಡಬಹುದು.

## 3. ಅಣಬೆ ಪಲಾವ್

**ಸಾಮಾಗ್ರಿಗಳು**

| | |
|---|---|
| ಉದ್ದನೆಯ ಅಕ್ಕಿ | : 250 ಗ್ರಾಂ. |
| ಕತ್ತರಿಸಿದ ಅಣಬೆ | : 250 ಗ್ರಾಂ. |
| ಹಸಿರು ಬಟಾಣಿ | : 50 ಗ್ರಾಂ. |
| ಕ್ಯಾರೆಟ್ ತುರಿ | : 50 ಗ್ರಾಂ. |
| ಈರುಳ್ಳಿ | : 50 ಗ್ರಾಂ. |
| ನಿಂಬೆಹಣ್ಣು | : 1 |
| ಹಸಿಮೆಣಸಿನಕಾಯಿ | : 2 |
| ಟೊಮ್ಯಾಟೊ | : 50 ಗ್ರಾಂ |
| ಗರಂಮಸಾಲ | : 5 ಗ್ರಾಂ. |
| ಎಣ್ಣೆ | : 30 ಗ್ರಾಂ. |
| ಕೊತ್ತಂಬರಿ | : 1/2ಕಟ್ಟು |
| ಪುದೀನಾ ಸೊಪ್ಪು | : 30ಗ್ರಾಂ |

**ಮಾಡುವ ವಿಧಾನ**

- ಒಂದು ಲೋಟ ಅಕ್ಕಿಯನ್ನು ತೊಳೆದು ಅರ್ಧ ಗಂಟೆ ಕಾಲ ನೆನೆಸಿಡಿ.
- ಈರುಳ್ಳಿ ಮೆಣಸಿನಕಾಯಿ, ಟೊಮ್ಯಾಟೊ, ಹಸಿರುಬಟಾಣಿ ಮತ್ತು ಅಣಬೆಯನ್ನು ಎಣ್ಣೆಯಲ್ಲಿ ಕರಿಯಿರಿ.
- ಇದಕ್ಕೆ ನೆನೆಸಿ ಬಸಿದ ಅಕ್ಕಿಯನ್ನು ಹಾಕಿ ಸ್ವಲ್ಪ ಹೊತ್ತು ಬೇಯಿಸಿ.
- ಅನಂತರ ತರಕಾರಿ, ಕೊತ್ತಂಬರಿ ಸೊಪ್ಪು, ಪುದೀನಾ ಸೊಪ್ಪು, ಗರಂ ಮಸಾಲ, ನಿಂಬೆ ಹಣ್ಣಿನ ರಸ ಬೆರೆಸಿ, ಬಳಿಕ 2 ಲೋಟ ನೀರು ಸೇರಿಸಿ 5–10 ನಿಮಿಷಗಳ ಕಾಲ ಪ್ರೆಷರ್ ಕುಕ್ಕರ್‌ನಲ್ಲಿ ಬೇಯಿಸಿ, ತಂಪುಮಾಡಿ.
- ಅಣಬೆಯ ಪಲಾವ್ ಸಿದ್ಧ.

## 4. ಅಣಬೆ ಕರ್ರಿ

**ಸಾಮಾಗ್ರಿಗಳು**

| | |
|---|---|
| ಅಣಬೆ | : 200 ಗ್ರಾಂ |
| ಈರುಳ್ಳಿ | : 50 ಗ್ರಾಂ |
| ಬೆಳ್ಳುಳ್ಳಿ | : 10 ಗ್ರಾಂ |
| ಶುಂಠಿ | : 5 ಗ್ರಾಂ |
| ಟೊಮ್ಯಾಟೊ | : 50 ಗ್ರಾಂ |
| ಮೊಸರು/ಹಾಲು | : 15 ಗ್ರಾಂ |
| ತುಪ್ಪ | : 5 ಗ್ರಾಂ |

**ಮಾಡುವ ವಿಧಾನ**

- ತೊಳೆದ ಅಣಬೆ, ಈರುಳ್ಳಿ ಮತ್ತು ಟೊಮ್ಯಾಟೊಗಳನ್ನು ಸಣ್ಣಗೆ ಕತ್ತರಿಸಬೇಕು.
- ಬೆಳ್ಳುಳ್ಳಿ ಮತ್ತು ಶುಂಠಿಯನ್ನು ಚೆನ್ನಾಗಿ ಜಜ್ಜಿಡಬೇಕು.
- ತುಪ್ಪವನ್ನು ಕಾಯಿಸಿ, ಸಾಸಿವೆಯನ್ನು ಹಾಕಬೇಕು. ಈರುಳ್ಳಿ, ಜಜ್ಜಿದ ಬೆಳುಳ್ಳಿ ಮತ್ತು ಶುಂಠಿಯನ್ನು ಇದಕ್ಕೆ ಸೇರಿಸಿ ಚಿನ್ನದ ಬಣ್ಣಕ್ಕೆ ಬರುವತನಕ ಹುರಿಯಬೇಕು.
- ನಂತರ ಸಾಂಬಾರು ಪದಾರ್ಥಗಳು, ಉಪ್ಪು ಮತ್ತು ಟೊಮ್ಯಾಟೊವನ್ನು ಹಾಕಬೇಕು.
- ಮೊಸರು ಅಥವಾ ಹಾಲು ಸೇರಿಸಿದ ಮೇಲೆ ಅಣಬೆಯನ್ನು ಬೆರೆಸಿ ಅವಶ್ಯಕತೆಯಿದ್ದಲ್ಲಿ ನೀರನ್ನು ಹಾಕಬೇಕು.

ಆದಾಯೋತ್ಪನ್ನ ಚಟುವಟಿಕೆಯಾಗಿ

# ಚಿಪ್ಪು ಅಣಬೆ ಬೇಸಾಯ



ಲೇಖಕರು :
ಡಾ|| ಲತಾ ಆರ್.ಕುಲಕರ್ಣಿ
ಡಾ|| ಸವಿತಾ ಎಸ್.ಎಂ.
ಡಾ|| ರಾಜೇಂದ್ರ ಪ್ರಸಾದ್ ಬಿ.ಎಸ್.
ಶ್ರೀ ಕೆ.ಆರ್.ಶ್ಯಾಮಸುಂದರ್

2018–19

ಐ.ಸಿ.ಎ.ಆರ್. ಕೃಷಿ ವಿಜ್ಞಾನ ಕೇಂದ್ರ
ರಾಮನಗರ

